# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

ಸಂ: ಆಶಾ/ಕೋ.19ಶಾ.ಮಾ/01/2020-21 ದಿನಾಂಕ:- 15-05-2020

::::ಟಿಪ್ಪಣಿ::::

**ವಿಷಯ:-** ಕೋವಿಡ್-19 ಹಿನ್ನಲೆಯಲ್ಲಿ 2020-21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗಸೂಚಿ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:05-05-2020ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ2020-21ನೇ ಸಾಲಿನ ಶೈಕ್ಷಣಿಕ ವರ್ಷದ ಕಾರ್ಯಕ್ರಮಗಳ ಪೂರ್ವಸಿದ್ಧತಾ ಕುರಿತು ಇಲಾಖಾ ಅಧಿಕಾರಿಗಳೊಂದಿಗೆ ನಡೆದ ಸಭೆಗೆ ಸಂಬಂಧಿಸಿದಂತೆ ನಿರ್ದೇಶಕರು(ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ರವರಿಗೆ ಹಂಚಿಕೆ ಮಾಡಲಾಗಿದ್ದು, ಸದರಿ ಕಾರ್ಯದ ಬಗ್ಗೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳೊಂದಿಗೆ ಚರ್ಚಿಸಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸಬಹುದಾಗಿದೆ ಎಂಬ ಅಂಶವನ್ನು ತಮ್ಮ ಗೌರವ ಅವಗಾಹನೆಗೆ ಸಲ್ಲಿಸಿದೆ.

**1. ಶಾಲಾ ತರಗತಿ ಕೊಠಡಿಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ**

- ಶಾಲಾ ತರಗತಿ ಕೊಠಡಿಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಒಂದು ಡೆಸ್ಕ್‌ಗೆ ಮೂವರು ವಿದ್ಯಾರ್ಥಿಗಳಂತೆ ಕೂರಲು ಸೂಕ್ತ ಆಸನ ವ್ಯವಸ್ಥೆ ಮಾಡಬೇಕಿದೆ.
- ಈ ಸಂಬಂಧ ಕೊಠಡಿಗಳು ಕೊರತೆ ಬಂದಲ್ಲಿ ಶಾಲೆಯಲ್ಲಿರುವ ಗ್ರಂಥಾಲಯ ಕೊಠಡಿ, ಕ್ರೀಡಾ ಕೊಠಡಿ, ಗಣಕ ಯಂತ್ರ ಕೊಠಡಿಗಳನ್ನು ಬಳಸಿಕೊಳ್ಳಬೇಕು.
- ಜನವಸತಿ ಪ್ರದೇಶಗಳಲ್ಲಿ ಲಭ್ಯವಿರುವಂತಹ ಸಮುದಾಯ ಭವನಗಳು/ಸರ್ಕಾರಿ ಕಟ್ಟಡಗಳು ಮತ್ತು ಮಧ್ಯಾಹ್ನದ ನಂತರ ದೊರೆಯುವಂತಹ ಅಂಗನವಾಡಿ ಕೊಠಡಿಗಳನ್ನು ಬಳಸಿಕೊಳ್ಳಬಹುದಾಗಿದೆ.
- ರಾಜ್ಯದಲ್ಲಿ 1 ರಿಂದ 5 ನೇ ತರಗತಿ ನಡೆಯುತ್ತಿರುವ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿನ ಶಾಲೆಗಳಲ್ಲಿ ಕಡಿಮೆ ಇರುತ್ತದೆ. ಇಂತಹ ಶಾಲೆಗಳಲ್ಲಿ ಪಾಳಿ ಪದ್ಧತಿಯ ಅವಶ್ಯಕತೆ ಇರುವುದಿಲ್ಲ.
- 1 ರಿಂದ 7/8ನೇ ತರಗತಿ ಇರುವ ಶಾಲೆಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಂಡು ತರಗತಿ ನಡೆಸಲು ಮೇಲೆ ಸೂಚಿಸಿದ ರೀತ್ಯಾ ಎಲ್ಲ ರೀತಿಯ ಪ್ರಯತ್ನಗಳ ನಂತರವೂ ಕೊಠಡಿಗಳ ಕೊರತೆಯಾದಲ್ಲಿ ಪಾಳಿ ಪದ್ಧತಿ ಅಳವಡಿಸುವುದು.

**2. ಪಾಳಿ ಪದ್ಧತಿಯಲ್ಲಿ ಶಾಲೆ ನಡೆಸುವುದು**

ಪ್ರಸ್ತುತ ರಾಜ್ಯದಲ್ಲಿ ಕೆಳಕಂಡ ಮಾದರಿಯ ಶಾಲೆಗಳಿರುತ್ತವೆ.

1. 1 ರಿಂದ 5 ನೇ ತರಗತಿ.
2. 1 ರಿಂದ 7 ನೇ ತರಗತಿ.
3. 1 ರಿಂದ 8 ನೇ ತರಗತಿ.
4. 1 ರಿಂದ 10 ನೇ ತರಗತಿ.
5. 8 ರಿಂದ 10 ನೇ ತರಗತಿ.
6. 8 ರಿಂದ 12 ನೇ ತರಗತಿ.(ಪ್ರೌಢ ಶಾಲಾ ವಿಭಾಗ ಹಾಗೂ ಪದವಿ ಪೂರ್ವ ಕಾಲೇಜುಗಳು ಒಂದೇ ಆವರಣದಲ್ಲಿ)
7. ಎಲ್.ಕೆ.ಜಿ. ಯಿಂದ 12 ನೇ ತರಗತಿ (ಕೆ.ಪಿ.ಎಸ್.)

- 1 ರಿಂದ 3ನೇ ತರಗತಿಗೆ ನಲಿಕಲಿ ಆಧಾರಿತ ಬೋಧನೆ ಇದ್ದು ಈ ತರಗತಿಗಳಿಗೆ ತರಬೇತಿ ಪಡೆದ ಖಾಯಂ ಶಿಕ್ಷಕರ ಅವಶ್ಯಕತೆ ಇರುತ್ತದೆ.

Scanned with CamScanner

- 1 ಮತ್ತು 2ನೇ ತರಗತಿಯ ನಲಿಕಲಿ ಮಕ್ಕಳನ್ನು ಒಟ್ಟಿಗೆ ಸೇರ್ಪಡೆ ಮಾಡಿ ಬೋಧಿಸಬಹುದು. 3ನೇ ತರಗತಿಯ ವಿದ್ಯಾರ್ಥಿಗಳು ಈಗಾಗಲೇ ನಲಿ ಕಲಿ ಬೋಧನೆಯ ಪರಿಚಯ ಇರುವುದರಿಂದ ಇವರಿಗೆ ಸ್ವಕಲಿಕೆಗೆ ಆದ್ಯತೆ ನೀಡಿ ಪ್ರತ್ಯೇಕ ಕೊಠಡಿಯಲ್ಲಿ ಬೋಧನಾ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬಹುದು.
- 1 ರಿಂದ 7ನೇ ತರಗತಿಗೆ ಶಿಕ್ಷಕರ ಕೊರತೆಯಿದ್ದಲ್ಲಿ ಸ್ಥಳೀಯವಾಗಿ ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳಬಹುದು.
- 1 ರಿಂದ 10ನೇ ತರಗತಿಗಳು ಇರುವ ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆ ಇರುತ್ತದೆ.(ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೊರತುಪಡಿಸಿ) ಪ್ರಾಥಮಿಕ ಶಾಲೆಗಳಲ್ಲಿಯೂ ಇತ್ತೀಚೆಗೆ ಪದವಿಗಳನ್ನು ಪಡೆದಿರುವ ಶಿಕ್ಷಕರು ಇರುತ್ತಾರೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರು ಪರಸ್ಪರ ಸಮಾಲೋಚಿಸಿಕೊಂಡು ಪ್ರೌಢಶಾಲೆ ಶಿಕ್ಷಕರು ಪ್ರಾಥಮಿಕ ಶಾಲೆಗಳ 6 ಮತ್ತು 7ನೇ ತರಗತಿಗಳಿಗೂ ಪ್ರಾಥಮಿಕ ಶಾಲೆಗಳಲ್ಲಿ ಪದವಿ ಹೊಂದಿರುವ ಶಿಕ್ಷಕರು 8 ಮತ್ತು 9ನೇ ತರಗತಿಗಳಿಗೆ ಬೋಧಿಸುವ ಪ್ರಕ್ರಿಯೆ ಮಾಡಬಹುದಾಗಿರುತ್ತದೆ. (ಈಗಾಗಲೇ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಈ ಪದ್ಧತಿಯನ್ನು ಅನುಸರಿಸಲಾಗುತ್ತಿದೆ). ಇಲ್ಲಿ ಪಾಳಿ ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ಶಿಕ್ಷಕರು ಪರಸ್ಪರ ಹೊಂದಾಣಿಕೆಯ ಮೇಲೆ ಬೋಧಿಸಬಹುದಾಗಿದೆ.
- 8 ರಿಂದ 10ನೇ ತರಗತಿ ಇರುವ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಕಂಡುಬಂದಲ್ಲಿ ಪಾಳಿ ಪದ್ಧತಿಯನ್ನು ಅಳವಡಿಸಬಹುದಾಗಿದೆ.
- 8 ರಿಂದ 12ನೇ ತರಗತಿಗಳು ಇರುವ ಕಡೆ ಕೊಠಡಿ ಕೊರತೆ ಕಂಡುಬಂದಲ್ಲಿ ಕೆಳಕಂಡಂತೆ ಪಾಳಿ ಪದ್ಧತಿ ಅಳವಡಿಸಿದಲ್ಲಿ ಕೊಠಡಿ ಸಮಸ್ಯೆ ಬರಲಾರದು.

  ಬಹುತೇಕ ಪಿ.ಯು.ಕಾಲೇಜುಗಳು ಪ್ರಸ್ತುತ 10 ರಿಂದ 3.30 ರವರೆಗೆ ನಡೆಯುತ್ತಿವೆ. ಈ ಅವಧಿಯನ್ನು ಮಾರ್ಪಡಿಸಿ ಈ ಹಿಂದೆ ನಡೆಯುತ್ತಿದ್ದ ರೀತಿಯಲ್ಲಿ ಪಿ.ಯು ತರಗತಿಗಳನ್ನು ಬೆಳಗ್ಗೆ 8.30 ರಿಂದ 12.30 ರವರೆಗೆ ನಡೆಸಿದಲ್ಲಿ ಪಿ.ಯು ತರಗತಿಗಳನ್ನು ಕೂಡ ಪ್ರೌಢಶಾಲಾ ಕೊಠಡಿಗಳನ್ನು ಬಳಸಿಕೊಂಡು ಸಾಮಾಜಿಕ ಅಂತರದೊಂದಿಗೆ ತರಗತಿಗಳನ್ನು ನಡೆಸಬಹುದಾಗಿದೆ. ಅದೇ ರೀತಿ ಪ್ರೌಢಶಾಲೆಗಳನ್ನು ಕೂಡ ಪಿ.ಯು ಕೊಠಡಿಗಳನ್ನು ಬಳಸಿಕೊಂಡು ಸಾಮಾಜಿಕ ಅಂತರದೊಂದಿಗೆ ಮಧ್ಯಾಹ್ನ ಪಾಳಿಯಲ್ಲಿ ತರಗತಿಗಳನ್ನು ನಡೆಸಬಹುದಾಗಿದೆ.
- ತಾಲ್ಲೂಕು/ಹೋಬಳಿ ಕೇಂದ್ರಗಳಲ್ಲಿ ಕೆಲವು ಶಾಲೆಗಳು ಮಕ್ಕಳ ಕೊರತೆಯಿಂದ ಮುಚ್ಚಲ್ಪಟ್ಟಿದ್ದಲ್ಲಿ ಅಂತಹ ಕೊಠಡಿಗಳಿಗೆ ಪ್ರೌಢಶಾಲೆಯ ಕೆಲವು ತರಗತಿಗಳನ್ನು ಸ್ಥಳಾಂತರಿಸಬಹುದಾಗಿದೆ. ಒಂದು ವೇಳೆ ಸಣ್ಣ-ಪುಟ್ಟ ದುರಸ್ತಿ ಅವಶ್ಯಕತೆಯಿದ್ದಲ್ಲಿ ಮಾಡಿಸಿಕೊಳ್ಳಬಹುದು.

  ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಶಾಲೆಯನ್ನು ಪಾಳಿ ಪದ್ಧತಿಯಲ್ಲಿ ನಡೆಸುವ ಬಗ್ಗೆ ನಿರ್ಣಯ ಕೈಗೊಂಡಲ್ಲಿ ಈ ರೀತಿ ಸಮಯ ಹಂಚಿಕೆ ಮಾಡಿಕೊಳ್ಳಬಹುದಾಗಿದೆ. ಮೊದಲನೇ ಪಾಳಿ ಸಮಯ ಬೆಳಗ್ಗೆ 7:50 ರಿಂದ ಮಧ್ಯಾಹ್ನ 12:20ರವರೆಗೆ ಹಾಗೂ ಎರಡನೇ ಪಾಳಿ ಮಧ್ಯಾಹ್ನ 12:10 ರಿಂದ ಸಂಜೆ 5:00 ಗಂಟೆಯವರೆಗೆ. ಇದಕ್ಕನುಗುಣವಾಗಿ ಶಾಲಾ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಿದ್ದು ಬೋಧನಾ ಅವಧಿಯನ್ನು ಕಡಿತಗೊಳಿಸಿ ಈ ಕೆಳಕಂಡಂತೆ ನಿಗಧಿಗೊಳಿಸಬಹುದಾಗಿರುತ್ತದೆ.

- <u>ಮೊದಲನೇ ಪಾಳಿ:-</u>

  ಬೆಳಗ್ಗೆ 7.50 ರಿಂದ 8.00(ಪ್ರಾರ್ಥನೆ)
  ಬೆಳಗ್ಗೆ 8.00 ರಿಂದ 8.40(ಮೊದಲನೇ ಅವಧಿ)
  ಬೆಳಗ್ಗೆ 8.40 ರಿಂದ 9.20(ಎರಡನೇ ಅವಧಿ)
  ಬೆಳಗ್ಗೆ 9.20 ರಿಂದ 9.40 (ವಿರಾಮ)
  ಬೆಳಗ್ಗೆ 9.40 ರಿಂದ 10.20(ಮೂರನೇ ಅವಧಿ)
  ಬೆಳಗ್ಗೆ 10.20 ರಿಂದ 11.00(ನಾಲ್ಕನೇ ಅವಧಿ)
  ಬೆಳಗ್ಗೆ 11.00 ರಿಂದ 11.40(ಐದನೇ ಅವಧಿ)
  ಬೆಳಗ್ಗೆ 11.40 ರಿಂದ 12.20(ಆರನೇ ಅವಧಿ)

- <u>ಎರಡನೇ ಪಾಳಿ:-</u>

  ಮಧ್ಯಾಹ್ನ 12.10 ರಿಂದ 12.40(ಪ್ರಾರ್ಥನೆ)

Scanned with CamScanner

ಮಧ್ಯಾಹ್ನ 12.30 ರಿಂದ 01.10(ಮೊದಲನೇ ಅವಧಿ)
ಮಧ್ಯಾಹ್ನ 01.10 ರಿಂದ 01.50(ಎರಡನೇ ಅವಧಿ)
ಮಧ್ಯಾಹ್ನ 01.50 ರಿಂದ 02.20(ಊಟದ ವಿರಾಮ)
ಮಧ್ಯಾಹ್ನ 02.20 ರಿಂದ 03.00(ಮೂರನೇ ಅವಧಿ)
ಮಧ್ಯಾಹ್ನ 03.00 ರಿಂದ 03.40(ನಾಲ್ಕನೇ ಅವಧಿ)
ಮಧ್ಯಾಹ್ನ 03.40 ರಿಂದ 04.20(ಐದನೇ ಅವಧಿ)
ಮಧ್ಯಾಹ್ನ 04.20 ರಿಂದ 05.00(ಆರನೇ ಅವಧಿ)

ಪ್ರಸ್ತುತ ಒಂದು ವಾರಕ್ಕೆ ಮುಖ್ಯ ವಿಷಯಗಳಾದ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಪ್ರಥಮ ಭಾಷಾ ವಿಷಯಗಳಿಗೆ ತಲಾ 06 ರಂತೆ , ದ್ವಿತೀಯ ಮತ್ತು ತೃತೀಯ ಭಾಷೆಗೆ ತಲಾ 05, ದೈಹಿಕ ಶಿಕ್ಷಣ ವಿಷಯಕ್ಕೆ 04, ಚಿತ್ರಕಲೆ/ಸಂಗೀತ/ವೃತ್ತಿ ಶಿಕ್ಷಣ ವಿಷಯಕ್ಕೆ 03, ಗ್ರಂಥಾಲಯ/ಗಣಕ ಶಿಕ್ಷಣ ವಿಷಯಕ್ಕೆ 02 ರಂತೆ, ಸಹ ಪಠ್ಯಕ್ರಮ ಚಟುವಟಿಕೆಗಳಿಗೆ 02 ತರಗತಿಗಳಂತೆ ಒಟ್ಟು 45 ತರಗತಿಗಳನ್ನು ನಡೆಸಲಾಗುತ್ತಿದೆ. ಮೇಲ್ಕಾಣಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ದೈಹಿಕ ಶಿಕ್ಷಣದಲ್ಲಿ 3 ತರಗತಿಗಳು, ಚಿತ್ರಕಲೆ/ಸಂಗೀತ/ವೃತ್ತಿ ಶಿಕ್ಷಣ ವಿಷಯದಲ್ಲಿ 03, ಸಹ ಪಠ್ಯಕ್ರಮ ಚಟುವಟಿಕೆಗಳ ವಿಷಯದಲ್ಲಿ 02 ಮತ್ತು ಗ್ರಂಥಾಲಯ/ಗಣಕ ಶಿಕ್ಷಣ ವಿಷಯದಲ್ಲಿ 01 ತರಗತಿಗಳನ್ನು ಕಡಿತಗೊಳಿಸಿ ಒಂದು ವಾರಕ್ಕೆ 36 ತರಗತಿಗಳನ್ನು ನಡೆಸುವಂತೆ ಕ್ರಮಕೈಗೊಳ್ಳಬಹುದು.

**3. ವೇಳಾ ಪಟ್ಟಿಯನ್ನು ಕ್ರಿಯಾತ್ಮಕವಾಗಿ ರೂಪಿಸುವ ಬಗ್ಗೆ.**

ಗ್ರಾಮೀಣ ಭಾಗದಲ್ಲಿ ಈ ಮೇಲಿನ ವೇಳಾಪಟ್ಟಿಯನ್ನು ಅಳವಡಿಸಿಕೊಂಡಲ್ಲಿ ಪಕ್ಕದ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳಿಗೆ ಬೆಳಗಿನ ಉಪಹಾರದ ವ್ಯವಸ್ಥೆಗೆ ಸಮಸ್ಯೆಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ವೇಳಾಪಟ್ಟಿಗಳ(ಸಮಯ) ನಿಗಧಿಯನ್ನು ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಅಳವಡಿಸಿಕೊಳ್ಳಲು ಆಯಾ ಜಿಲ್ಲಾಡಳಿತ ಅಥವಾ ಜಿಲ್ಲಾ ಪಂಚಾಯಿತಿಗಳಿಗೆ ಬಿಡಬಹುದಾಗಿದೆ.

ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಸಾಮಾಜಿಕ ಅಂತರದೊಂದಿಗೆ ತರಗತಿ ನಡೆಸುವ ಹೊಣೆಗಾರಿಕೆಯನ್ನು ಆಯಾ ಆಡಳಿತ ಮಂಡಳಿಗಳಿಗೆ ನಿಗಧಿಪಡಿಸಬೇಕು. ಕೊಠಡಿ ಸೌಲಭ್ಯ, ಸಾರಿಗೆ ಸೌಲಭ್ಯ ಮಕ್ಕಳ ಸುರಕ್ಷತೆ ಇವುಗಳ ಹೊಣೆಗಾರಿಕೆಯನ್ನು ಆಡಳಿತ ಮಂಡಳಿಗೆ ನಿಗಧಿಪಡಿಸಬೇಕು.

ಕೊಠಡಿಗಳ ಲಭ್ಯತೆ, ಶಿಕ್ಷಕರ ಲಭ್ಯತೆ ಮತ್ತು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳಿಗೆ ಕ್ರಿಯಾತ್ಮಕವಾದ ವೇಳಾ ಪಟ್ಟಿಯನ್ನು ತಯಾರಿಸಲು ಹಾಗೂ ಮೊದಲನೇ ಪಾಳಿ ಶಿಕ್ಷಕರು ಬೆಳಿಗ್ಗೆ 7:50ರಿಂದ ಮದ್ಯಾಹ್ನ 3:00 ಗಂಟೆ ಮತ್ತು ಎರಡನೇ ಪಾಳಿ ಶಿಕ್ಷಕರು ಮದ್ಯಾಹ್ನ 12:10ರಿಂದ ಸಂಜೆ 5:00ರವರೆಗೆ ಶಾಲೆಯಲ್ಲಿ ಹಾಜರಿರುವ ಹಾಗೆ ಶಿಕ್ಷಕರ ಲಭ್ಯತೆಯನುಸಾರ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಅನುಮೋದನೆಯೊಂದಿಗೆ ಕ್ರಮಕೈಗೊಳ್ಳಬಹುದಾಗಿದೆ. ಒಟ್ಟಾರೆ ಬೆಳಿಗ್ಗೆ 8:00 ಗಂಟೆಗೆ ಬರುವ ಶಿಕ್ಷಕರು ಸಂಜೆ 5:00ರವರೆಗು ಶಾಲೆಯಲ್ಲಿ ಇರುವ ಅವಶ್ಯಕತೆ ಇರುವುದಿಲ್ಲ. ಶಾಲಾವಾರು/ ವಿಷಯವಾರು/ ತರಗತಿವಾರು ವೇಳಾಪಟ್ಟಿಯನ್ನು ರೂಪಿಸುವುದು ಅವಶ್ಯಕ. ಕ್ಷೇತ್ರ ಶಿಕ್ಷಣಾಧಿಕಾರಿರವರು ತಮ್ಮ ವ್ಯಾಪ್ತಿಯಲ್ಲಿನ ಪ್ರತಿಯೊಂದು ಶಾಲೆಯ ಅಗತ್ಯತೆ / ಅವಶ್ಯಕತೆ / ಸಂಪನ್ಮೂಲಗಳ ಲಭ್ಯತೆಗನುಗುಣವಾಗಿ ಪಾಳಿ ಪದ್ಧತಿ (ಅವಶ್ಯವೆನಿಸಿದಲ್ಲಿ) ವೇಳಾಪಟ್ಟಿಯನ್ನು ಕ್ರಿಯಾತ್ಮಕವಾಗಿ ರೂಪಿಸಿಕೊಳ್ಳಲು ಆಯಾ ಶಾಲಾ ಮುಖ್ಯ ಶಿಕ್ಷಕರು ಹಾಗೂ ಸಂಸ್ಥೆಯ ಆಡಳಿತ ಮಂಡಳಿಗೆ ಅವಕಾಶ ನೀಡುವುದು. ಹೀಗೆ ಮಾಡುವಾಗ ಇಲಾಖೆಯು ನೀಡುವ ಈ ಮಾರ್ಗ ಸೂಚಿಗಳನ್ನು ಅಗತ್ಯವಾಗಿ ಪಾಲಿಸುವುದು ಕಡ್ಡಾಯವಾಗಿರುತ್ತದೆ. ತರಗತಿಗಳನ್ನು ಪಾಳಿಯ ಪ್ರಕಾರ ಆಯೋಜಿಸಲು ಮಾದರಿ ವೇಳಾಪಟ್ಟಿಗಳನ್ನು ಅನುಬಂಧದಲ್ಲಿ ನೀಡಿದೆ.(ಅನುಬಂಧ-01 ರಿಂದ 04)

**4. ಸಾರಿಗೆ ವ್ಯವಸ್ಥೆ ಬಗ್ಗೆ.**

ಖಾಸಗಿ ಶಾಲೆಯ ಆಡಳಿತ ಮಂಡಳಿಯವರು ಸಾರಿಗೆ ವ್ಯವಸ್ಥೆಯನ್ನು ಒದಗುಸುವಾಗ ವಿದ್ಯಾರ್ಥಿಗಳನ್ನು ವಾಹನದಲ್ಲಿ ಕರೆತರುವಾಗ ಸಾಮಾಜಿಕ ಅಂತರ ಪಾಲನೆ ಮಾಡಿ ವಿದ್ಯಾರ್ಥಿಗಳನ್ನು ಕರೆತರಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.

**5. ಪ್ರಾರ್ಥನೆ.**

ಪ್ರತಿ ದಿನದ ಶಾಲಾ ಚಟುವಟಿಕೆ ಪ್ರಾರಂಭದಲ್ಲಿ ನಡೆಯುವ ಪ್ರಾರ್ಥನೆಯಲ್ಲಿ ವಿದ್ಯಾರ್ಥಿಗಳು ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಆಯಾ ಶಾಲಾ ಮುಖ್ಯೋಪಾಧ್ಯಾಯರು ಕ್ರಮಕೈಗೊಳ್ಳುವುದು.

Scanned with CamScanner

**6. ಶೌಚಾಲಯ & ಊಟದ ಸಮಯದ ಸ್ವಚ್ಛತೆ ಬಗ್ಗೆ.**

ವಿದ್ಯಾರ್ಥಿಗಳು ಊಟದ ಮುನ್ನ ಮತ್ತು ನಂತರ ಕೈಗಳನ್ನು ಸಾಬೂನಿನಿಂದ ತೊಳೆಯುವಂತೆ ಹಾಗೂ ವಿದ್ಯಾರ್ಥಿಗಳು ಶೌಚಾಲಯ ಬಳಸಿದ ನಂತರ ಸಾಬೂನಿನಿಂದ ಕೈಗಳನ್ನು ತೊಳೆಯುವಂತೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಹಾಗೂ ಶಾಲಾ ಮೈದಾನದಲ್ಲಿ ಆಟದ ಸಮಯದಲ್ಲಿ ಸಾಮಾಜಿಕ ಅಂತರ ಕಾಪಾಡುವ ಬಗ್ಗೆ, ಹಾಗೆಯೇ ಊಟದ ಸಮಯದಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಶಾಲಾ ಮುಖ್ಯೋಪಾಧ್ಯಾಯರು ಅಗತ್ಯ ಕ್ರಮ ಕೈಗೊಳ್ಳುವುದು.

ಒಂದು ವೇಳೆ ಪಾಳಿ ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ಕ್ಷೀರ ಭಾಗ್ಯ ಯೋಜನೆಯಲ್ಲಿ ನೀಡುವ ಹಾಲಿನ ವಿತರಣೆಯನ್ನು ಬೆಳಗಿನ ಪಾಳಿಯಲ್ಲಿ ಶಾಲೆಗೆ ಬರುವಾಗ ನೀಡಬೇಕು. ಮಧ್ಯಾಹ್ನದ ಪಾಳಿಯಲ್ಲಿ ಮನೆಗೆ ಹೋಗುವಾಗ ನೀಡಬಹುದು. ಇಲ್ಲವಾದಲ್ಲಿ ಮಕ್ಕಳ ಹಾಜರಾತಿಯನ್ನಾಧರಿಸಿ ನಿಗಧಿತ ಪ್ರಮಾಣದ ಹಾಲಿನ ಪುಡಿಯನ್ನು ನೀಡಬಹುದು. ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಬಿಸಿಯೂಟ ಒದಗಿಸುವ ಶಾಲೆಗಳಲ್ಲಿ ಮದ್ಯಾಹ್ನದ ಪಾಳಿಯ ಮಕ್ಕಳಿಗೆ ಹಾಲಿನ ಪುಡಿಯನ್ನು ನಿಗದಿತ ಪ್ರಮಾಣದಲ್ಲಿ ಒಂದು ತಿಂಗಳಿಗಾಗುವಷ್ಟು ಮುಂಚಿತವಾಗಿಯೇ ನೀಡಬಹುದು.

ಮೇಲಿನ ಅಂಶಗಳನ್ನು ಆಯಾ ಶಾಲೆಯ ಸ್ಥಳೀಯ ಸಂದರ್ಭಕ್ಕನುಗುಣವಾದ ಮಾರ್ಪಾಡುಗಳೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾರ್ಗದರ್ಶನ ಹಾಗೂ ಸಂಬಂಧಿಸಿದ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯ್ತಿಯ ಅನುಮೋದನೆಯೊಂದಿಗೆ ಜಾರಿಗೆ ತರುವುದರ ಬಗ್ಗೆ ರಾಜ್ಯ ಕಚೇರಿಯಿಂದ ನಿರ್ದೇಶನ ನೀಡಬಹುದಾಗಿದೆ.

ನಿರ್ದೇಶಕರು (ಪರೀಕ್ಷೆಗಳು)
ಕ ಪ್ರೌ ಶಿ ಪ ಮಂಡಳಿ 15/5/2020

Scanned with CamScanner

## ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಅನುಬಂಧ:– 01

## 2020–21 ನೇ ಸಾಲಿನ ಸಾಮಾನ್ಯ ವೇಳಾಪಟ್ಟಿ – 1 ನೇ ಪಾಳಿ

| ಅವಧಿ ತರಗತಿ | ವಾರಗಳು | 7.50 ರಿಂದ 8.00 | 1 | 2 | 09.20 ರಿಂದ 09.40 | 3 | 4 | 5 | 6 |
|---|---|---|---|---|---|---|---|---|---|
| | | | 8.00 ರಿಂದ 8.40 | 8.40 ರಿಂದ 9.20 | | 09.40 ರಿಂದ 10.20 | 10.20 ರಿಂದ 11.00 | 11.00 ರಿಂದ 11.40 | 11.40 ರಿಂದ 12.20 |
| ನಲಿ – ಕಲಿ (1 ರಿಂದ 3 ನೇ ತರಗತಿ) | ಸೋಮವಾರ | ಪ್ರಾರ್ಥನೆ | ಕನ್ನಡ | ಕನ್ನಡ | ವಿರಾಮ | ಗಣಿತ | ಗಣಿತ | ಪರಿಸರ ಅಧ್ಯಯನ | ಇಂಗ್ಲೀಷ್ |
| | ಮಂಗಳವಾರ | | ಕನ್ನಡ | ಕನ್ನಡ | | ಗಣಿತ | ಗಣಿತ | ಪರಿಸರ ಅಧ್ಯಯನ | ಇಂಗ್ಲೀಷ್ |
| | ಬುಧವಾರ | | ಕನ್ನಡ | ಕನ್ನಡ | | ಗಣಿತ | ಗಣಿತ | ಪರಿಸರ ಅಧ್ಯಯನ | ಇಂಗ್ಲೀಷ್ |
| | ಗುರುವಾರ | | ಕನ್ನಡ | ಕನ್ನಡ | | ಗಣಿತ | ಗಣಿತ | ಪರಿಸರ ಅಧ್ಯಯನ | ಇಂಗ್ಲೀಷ್ |
| | ಶುಕ್ರವಾರ | | ಕನ್ನಡ | ಕನ್ನಡ | | ಗಣಿತ | ಗಣಿತ | ಪರಿಸರ ಅಧ್ಯಯನ | ಇಂಗ್ಲೀಷ್ |
| | ಶನಿವಾರ | | ಕನ್ನಡ | ಕನ್ನಡ | | ಜೀವನ ವಿಜ್ಞಾನ | ಜೀವನ ವಿಜ್ಞಾನ | ಪರಿಸರ ಅಧ್ಯಯನ | ಇಂಗ್ಲೀಷ್ |

### ಲಭ್ಯವಾಗುವ ಅವಧಿಗಳು

| | | | | |
|---|---|---|---|---|
| 1 | ಪ್ರಥಮ ಭಾಷೆ | ೮೦ ನಿಮಿಷ | 6 | 12 |
| 2 | ಗಣಿತ | ೮೦ ನಿಮಿಷ | 5 | 10 |
| 3 | ಪ ಅಧ್ಯಯನ | ೪೦ ನಿಮಿಷ | 6 | 6 |
| 4 | ಇಂಗ್ಲೀಷ್ | ೪೦ ನಿಮಿಷ | 6 | 6 |
| 5 | ಜೀ.ವಿಜ್ಞಾನ | | 2 | 2 |
| | | | ಒಟ್ಟು | 36 |

Scanned with CamScanner

## ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ

ಅನುಬಂಧ:- 02

## 2020-21 ನೇ ಸಾಲಿನ ಸಾಮಾನ್ಯ ವೇಳಾಪಟ್ಟಿ - 1 ನೇ ಪಾಳಿ

| ಅವಧಿ ತರಗತಿ | ವಾರಗಳು | 7.50 ರಿಂದ 8.00 | 1<br>8.00 ರಿಂದ 8.40 | 2<br>8.40 ರಿಂದ 9.20 | 09.20 ರಿಂದ 09.40 | 3<br>09.40 ರಿಂದ 10.20 | 4<br>10.20 ರಿಂದ 11.00 | 5<br>11.00 ರಿಂದ 11.40 | 6<br>11.40 ರಿಂದ 12.20 |
|---|---|---|---|---|---|---|---|---|---|
| IV | ಸೋಮವಾರ | ಪ್ರಾರ್ಥನೆ | ಕನ್ನಡ | ಗಣಿತ | ವಿರಾಮ | ಇಂಗ್ಲೀಷ್ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಕನ್ನಡ |
| | ಮಂಗಳವಾರ | | ಕನ್ನಡ | ಗಣಿತ | | ಇಂಗ್ಲೀಷ್ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಕನ್ನಡ |
| | ಬುಧವಾರ | | ಕನ್ನಡ | ಗಣಿತ | | ಇಂಗ್ಲೀಷ್ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಕನ್ನಡ |
| | ಗುರುವಾರ | | ಕನ್ನಡ | ಗಣಿತ | | ಇಂಗ್ಲೀಷ್ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಚಿತ್ರಕಲೆ |
| | ಶುಕ್ರವಾರ | | ಕನ್ನಡ | ಗಣಿತ | | ಜೀವನ ವಿಜ್ಞಾನ | ಪರಿಸರ ಅಧ್ಯಯನ | ಕನ್ನಡ | ಚಿತ್ರಕಲೆ |
| | ಶನಿವಾರ | | ಕನ್ನಡ | ಗಣಿತ | | ಜೀವನ ವಿಜ್ಞಾನ | ಪರಿಸರ ಅಧ್ಯಯನ | ಜೀವನ ವಿಜ್ಞಾನ | ಮೌಲ್ಯ ಶಿಕ್ಷಣ |
| V | ಸೋಮವಾರ | ಪ್ರಾರ್ಥನೆ | ಕನ್ನಡ | ಇಂಗ್ಲೀಷ್ | ಆಟದ ವಿರಾಮ | ಗಣಿತ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಜೀವನ ವಿಜ್ಞಾನ |
| | ಮಂಗಳವಾರ | | ಕನ್ನಡ | ಇಂಗ್ಲೀಷ್ | | ಗಣಿತ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಜೀವನ ವಿಜ್ಞಾನ |
| | ಬುಧವಾರ | | ಕನ್ನಡ | ಇಂಗ್ಲೀಷ್ | | ಗಣಿತ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಜೀವನ ವಿಜ್ಞಾನ |
| | ಗುರುವಾರ | | ಕನ್ನಡ | ಇಂಗ್ಲೀಷ್ | | ಗಣಿತ | ಪರಿಸರ ಅಧ್ಯಯನ | ಪರಿಸರ ಅಧ್ಯಯನ | ಸಾಮಾಜಿಕ ಉಪಯುಕ್ತ ಕಾರ್ಯ |
| | ಶುಕ್ರವಾರ | | ಕನ್ನಡ | ಇಂಗ್ಲೀಷ್ | | ಗಣಿತ | ಪರಿಸರ ಅಧ್ಯಯನ | ಕನ್ನಡ | ಸಾಮಾಜಿಕ ಉಪಯುಕ್ತ ಕಾರ್ಯ |
| | ಶನಿವಾರ | | ಕನ್ನಡ | ಮೌಲ್ಯ ಶಿಕ್ಷಣ | | ಗಣಿತ | ಪರಿಸರ ಅಧ್ಯಯನ | ಜೀವನ ವಿಜ್ಞಾನ | ಯೋಜನೆ |

ಲಭ್ಯವಾಗುವ ಅವಧಿಗಳು ೫ ನೇ

| | | | | |
|---|---|---|---|---|
| 1 | ಪ್ರಥಮ ಭಾಷೆ | 7 | ಸಾ.ಉ.ಕಾ | 2 |
| 2 | ದ್ವಿತೀಯ ಭಾ | 5 | ಯೋಜನೆ | 1 |
| 3 | ಗಣಿತ | 6 | | |
| 4 | ಪ ಅಧ್ಯಯನ | 10 | | |
| 5 | ಮೌ ಶಿಕ್ಷಣ | 1 | | |
| 6 | ಜೀ.ವಿಜ್ಞಾನ | 4 | | |

ಲಭ್ಯವಾಗುವ ಅವಧಿಗಳು ೪ ನೇ

| | | | |
|---|---|---|---|
| 1 | ಪ್ರಥಮ ಭಾಷೆ | 10 | ಚಿತ್ರಕಲೆ-2 |
| 2 | ದ್ವಿತೀಯ ಭಾಷೆ | 4 | ಮೌಲ್ಯ ಶಿಕ್ಷಣ-1 |
| 3 | ಗಣಿತ | 6 | |
| 4 | ಪ ಅಧ್ಯಯನ | 10 | |
| 5 | ಮೌ ಶಿಕ್ಷಣ | 1 | |
| 6 | ಜೀ.ವಿಜ್ಞಾನ | 3 | |

Scanned with CamScanner

## ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ

ಅನುಬಂಧ:- 03

### 2020-21 ನೇ ಸಾಲಿನ ಸಾಮಾನ್ಯ ವೇಳಾಪಟ್ಟಿ - 2 ನೇ ಪಾಳಿ

| ಅವಧಿ<br>ತರಗತಿ | ವಾರಗಳು | 12.10 ರಿಂದ 12.30 | 1<br>12.30 ರಿಂದ 1.10 | 2<br>1.10 ರಿಂದ 1.50 | 01.50 ರಿಂದ 02.20 | 3<br>02.20 ರಿಂದ 03.00 | 4<br>03.00 ರಿಂದ 03.40 | 5<br>03.40 ರಿಂದ 04.20 | 6<br>04.20 ರಿಂದ 05.00 |
|---|---|---|---|---|---|---|---|---|---|
| VI | ಸೋಮವಾರ | ಪ್ರಾರ್ಥನೆ | ಕನ್ನಡ | ಗಣಿತ | ಬಿಸಿಯೂಟ | ಇಂಗ್ಲೀಷ್ | ಸಮಾಜ ವಿಜ್ಞಾನ | ವಿಜ್ಞಾನ | ಹಿಂದಿ |
| | ಮಂಗಳವಾರ | | ಕನ್ನಡ | ಗಣಿತ | | ಇಂಗ್ಲೀಷ್ | ಸಮಾಜ ವಿಜ್ಞಾನ | ವಿಜ್ಞಾನ | ಹಿಂದಿ |
| | ಬುಧವಾರ | | ಕನ್ನಡ | ಗಣಿತ | | ಇಂಗ್ಲೀಷ್ | ಸಮಾಜ ವಿಜ್ಞಾನ | ವಿಜ್ಞಾನ | ಹಿಂದಿ |
| | ಗುರುವಾರ | | ಕನ್ನಡ | ಗಣಿತ | | ಇಂಗ್ಲೀಷ್ | ಸಮಾಜ ವಿಜ್ಞಾನ | ವಿಜ್ಞಾನ | ಹಿಂದಿ |
| | ಶುಕ್ರವಾರ | | ಕನ್ನಡ | ಗಣಿತ | | ಇಂಗ್ಲೀಷ್ | ಸಮಾಜ ವಿಜ್ಞಾನ | ವಿಜ್ಞಾನ | ಹಿಂದಿ |
| | ಶನಿವಾರ | | ಕನ್ನಡ | ಗಣಿತ | | ದೈಹಿಕ ಶಿಕ್ಷಣ | ಸಮಾಜ ವಿಜ್ಞಾನ | ವಿಜ್ಞಾನ | ದೈಹಿಕ ಶಿಕ್ಷಣ |
| VII | ಸೋಮವಾರ | ಪ್ರಾರ್ಥನೆ | ಗಣಿತ | ಕನ್ನಡ | ಬಿಸಿಯೂಟ | ವಿಜ್ಞಾನ | ಇಂಗ್ಲೀಷ್ | ಹಿಂದಿ | ಸಮಾಜ ವಿಜ್ಞಾನ |
| | ಮಂಗಳವಾರ | | ಗಣಿತ | ಕನ್ನಡ | | ವಿಜ್ಞಾನ | ಇಂಗ್ಲೀಷ್ | ಹಿಂದಿ | ಸಮಾಜ ವಿಜ್ಞಾನ |
| | ಬುಧವಾರ | | ಗಣಿತ | ಕನ್ನಡ | | ವಿಜ್ಞಾನ | ಇಂಗ್ಲೀಷ್ | ಹಿಂದಿ | ಸಮಾಜ ವಿಜ್ಞಾನ |
| | ಗುರುವಾರ | | ಗಣಿತ | ಕನ್ನಡ | | ವಿಜ್ಞಾನ | ಇಂಗ್ಲೀಷ್ | ಹಿಂದಿ | ಸಮಾಜ ವಿಜ್ಞಾನ |
| | ಶುಕ್ರವಾರ | | ಗಣಿತ | ಕನ್ನಡ | | ವಿಜ್ಞಾನ | ಇಂಗ್ಲೀಷ್ | ಹಿಂದಿ | ಸಮಾಜ ವಿಜ್ಞಾನ |
| | ಶನಿವಾರ | | ಗಣಿತ | ಕನ್ನಡ | | ವಿಜ್ಞಾನ | ದೈಹಿಕ ಶಿಕ್ಷಣ | ದೈಹಿಕ ಶಿಕ್ಷಣ | ಸಮಾಜ ವಿಜ್ಞಾನ |

ಲಭ್ಯವಾಗುವ ಅವಧಿಗಳು

| | | |
|---|---|---|
| 1 | ಪ್ರಥಮ ಭಾಷೆ | 6 |
| 2 | ಇಂಗ್ಲೀಷ್ | 5 |
| 3 | ಹಿಂದಿ | 5 |
| 4 | ಗಣಿತ | 6 |
| 5 | ವಿಜ್ಞಾನ | 6 |
| 6 | ಸ.ವಿಜ್ಞಾನ | 6 |
| 7 | ದೈ.ಶಿ | 2 |

Scanned with CamScanner

## ಸರ್ಕಾರಿ/ಅನುದಾನಿತ/ಅನುದಾನರಹಿತ ಪ್ರೌಢಶಾಲೆಗಳ ಅನುಬಂಧ:- 04

### 2020-21 ನೇ ಸಾಲಿನ ಸಾಮಾನ್ಯ ವೇಳಾಪಟ್ಟಿ - 1 ನೇ ಪಾಳಿ

| ಅವಧಿ ತರಗತಿ | ವಾರಗಳು | 7.50 ರಿಂದ 8.00 | 1<br>8.00 ರಿಂದ 8.40 | 2<br>8.40 ರಿಂದ 9.20 | 09.20 ರಿಂದ 09.40 | 3<br>09.40 ರಿಂದ 10.20 | 4<br>10.20 ರಿಂದ 11.00 | 5<br>11.00 ರಿಂದ 11.40 | 6<br>11.40 ರಿಂದ 12.20 |
|---|---|---|---|---|---|---|---|---|---|
| 8,9&10 | ಸೋಮವಾರ | ಪ್ರಾರ್ಥನೆ | ಗಣಿತ | ಹಿಂದಿ | ವಿರಾಮ | ವಿಜ್ಞಾನ | ಇಂಗ್ಲೀಷ್ | ಸ.ವಿಜ್ಞಾನ | ಕನ್ನಡ |
| | ಮಂಗಳವಾರ | | ಇಂಗ್ಲೀಷ್ | ಸ.ವಿಜ್ಞಾನ | | ಗಣಿತ | ಕನ್ನಡ | ವಿಜ್ಞಾನ | ಹಿಂದಿ |
| | ಬುಧವಾರ | | ವಿಜ್ಞಾನ | ಕನ್ನಡ | | ಇಂಗ್ಲೀಷ್ | ಗಣಿತ | ಹಿಂದಿ | ಸ.ವಿಜ್ಞಾನ |
| | ಗುರುವಾರ | | ಗಣಿತ | ಹಿಂದಿ | | ಸ.ವಿಜ್ಞಾನ | ಕನ್ನಡ | ದೈಹಿಕ ಶಿಕ್ಷಣ | ವಿಜ್ಞಾನ |
| | ಶುಕ್ರವಾರ | | ವಿಜ್ಞಾನ | ಕನ್ನಡ | | ಇಂಗ್ಲೀಷ್ | ಗಣಿತ | ಸ.ವಿಜ್ಞಾನ | ಹಿಂದಿ |
| | ಶನಿವಾರ | | ಇಂಗ್ಲೀಷ್ | ಸ.ವಿಜ್ಞಾನ | | ಗಣಿತ | ಕನ್ನಡ | ವಿಜ್ಞಾನ | ಗ್ರಂಥಾಲಯ |

ಲಭ್ಯವಾಗುವ ಅವಧಿಗಳು

| | | |
|---|---|---|
| 1 | ಪ್ರಥಮ ಭಾಷೆ | 6 |
| 2 | ದ್ವಿತೀಯ ಭಾಷೆ | 5 |
| 3 | ತೃತೀಯ ಭಾಷೆ | 5 |
| 4 | ಗಣಿತ | 6 |
| 5 | ವಿಜ್ಞಾನ | 6 |
| 6 | ಸ.ವಿಜ್ಞಾನ | 6 |
| 7 | ದೈಹಿಕ ಶಿಕ್ಷಣ | 1 |
| 8 | ಗ್ರಂಥಾಲಯ/ಕಂಪ್ಯೂ | 1 |
| | ಒಟ್ಟು | 36 |

### 2020-21 ನೇ ಸಾಲಿನ ಸಾಮಾನ್ಯ ವೇಳಾಪಟ್ಟಿ - 2 ನೇ ಪಾಳಿ

| ಅವಧಿ ತರಗತಿ | ವಾರಗಳು | 12.10 ರಿಂದ 12.30 | 1<br>12.30 ರಿಂದ 1.10 | 2<br>1.10 ರಿಂದ 1.50 | 01.50 ರಿಂದ 02.20 | 3<br>02.20 ರಿಂದ 03.00 | 4<br>03.00 ರಿಂದ 03.40 | 5<br>03.40 ರಿಂದ 04.20 | 6<br>04.20 ರಿಂದ 05.00 |
|---|---|---|---|---|---|---|---|---|---|
| 8,9&10 | ಸೋಮವಾರ | ಪ್ರಾರ್ಥನೆ | ಕನ್ನಡ | ಗಣಿತ | ಊಟದ ವಿರಾಮ | ಇಂಗ್ಲೀಷ್ | ಸ.ವಿಜ್ಞಾನ | ಹಿಂದಿ | ವಿಜ್ಞಾನ |
| | ಮಂಗಳವಾರ | | ಗಣಿತ | ಕನ್ನಡ | | ವಿಜ್ಞಾನ | ಇಂಗ್ಲೀಷ್ | ದೈಹಿಕ ಶಿಕ್ಷಣ | ಹಿಂದಿ |
| | ಬುಧವಾರ | | ಇಂಗ್ಲೀಷ್ | ವಿಜ್ಞಾನ | | ಗಣಿತ | ಹಿಂದಿ | ಸ.ವಿಜ್ಞಾನ | ಕನ್ನಡ |
| | ಗುರುವಾರ | | ಸ.ವಿಜ್ಞಾನ | ಇಂಗ್ಲೀಷ್ | | ವಿಜ್ಞಾನ | ಕನ್ನಡ | ಗಣಿತ | ಸ.ವಿಜ್ಞಾನ |
| | ಶುಕ್ರವಾರ | | ವಿಜ್ಞಾನ | ಸ.ವಿಜ್ಞಾನ | | ಕನ್ನಡ | ಗಣಿತ | ಇಂಗ್ಲೀಷ್ | ಹಿಂದಿ |
| | ಶನಿವಾರ | | ಹಿಂದಿ | ಗಣಿತ | | ಸ.ವಿಜ್ಞಾನ | ಕನ್ನಡ | ವಿಜ್ಞಾನ | ಗ್ರಂಥಾಲಯ |

ಲಭ್ಯವಾಗುವ ಅವಧಿಗಳು

| | | |
|---|---|---|
| 1 | ಪ್ರಥಮ ಭಾಷೆ | 6 |
| 2 | ದ್ವಿತೀಯ ಭಾಷೆ | 5 |
| 3 | ತೃತೀಯ ಭಾಷೆ | 5 |
| 4 | ಗಣಿತ | 6 |
| 5 | ವಿಜ್ಞಾನ | 6 |
| 6 | ಸ.ವಿಜ್ಞಾನ | 6 |
| 7 | ದೈಹಿಕ ಶಿಕ್ಷಣ | 1 |
| 8 | ಗ್ರಂಥಾಲಯ/ಕಂಪ್ಯೂ | 1 |
| | ಒಟ್ಟು | 36 |

Scanned with CamScanner